■ ವಿಶಾಖ ಎನ್.

# ಹಾಡು ಹಿಟ್ ಎಂದು ಅರಿಯುವ ಶ್ರೇಯಾ ಮಾರ್ಗ





ಸಿನಿಮಾ ಸಂಗೀತದ ಬಗ್ಗೆ ಗಾಯಕಿ ಶ್ರೇಯಾ ಘೋಷಾಲ್ ಹಾಗೂ ಸ್ವರ ಸಂಯೋಜಕ ತನಿಷ್ಕ್ ಬಾಗ್ಚಿ ಇಬ್ಬರೂ ಎರಡು ಮುಖ್ಯ ಅಭಿಪ್ರಾಯಗಳನ್ನು ಇತ್ತೀಚೆಗೆ ಹಂಚಿಕೊಂಡಿದ್ದಾರೆ. ಈಗ ಸಂಗೀತ ಕೇಳಿಸುವ ಹಲವು ಆನ್‌ಲೈನ್ ವೇದಿಕೆಗಳು ಇರುವುದರಿಂದ ಅವಕಾಶದ ದಿಡ್ಡಿ ಬಾಗಿಲು ತೆರೆದಿದೆ ಎಂದೇ ಬಹುತೇಕರು ಭಾವಿಸಿದ್ದಾರೆ. ವಾಸ್ತವದಲ್ಲಿ ಅಲ್ಲಿಯೂ ವ್ಯಾವಹಾರಿಕ ತಂತ್ರಗಳು ನಡೆಯುತ್ತಿವೆ ಎನ್ನುವುದರ ಕುರಿತು ಇಬ್ಬರೂ ಭಿನ್ನ ಬಗೆಯಲ್ಲಿ ಬೆಳಕು ಚೆಲ್ಲಿದ್ದಾರೆ. ಶ್ರೇಯಾ ಹೇಳುವಂತೆ, 'ಯಾವುದೇ ಗೀತೆಗೆ ಹೆಚ್ಚು ಲೈಕ್ಸ್ ಹಾಗೂ ಶೇರ್ ಸಿಗುವುದು ಒಂದು ಮಾರುಕಟ್ಟೆಯ ತಂತ್ರ ಆಗಿದೆ. ಅದನ್ನು ಹಣ ಕೊಟ್ಟು ಖರೀದಿಸುವ ಅವಕಾಶ ಇದೆ. ಹೀಗಾಗಿ ಅದೊಂದನ್ನು ಪರಿಗಣಿಸಿ, ಹಾಡು ನಿಜಕ್ಕೂ ಜನಪ್ರಿಯವಾಗಿದೆ ಎಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ವೇದಿಕೆ ಕಾರ್ಯಕ್ರಮಗಳನ್ನು ನೀಡುವಾಗ ವ್ಯಕ್ತಗೊಳ್ಳುವ ಜನಾಭಿಪ್ರಾಯವೇ ಒಂದು ಹಾಡಿಗೆ ಸಿಗುವ ಅಸಲಿ ಪ್ರತಿಕ್ರಿಯೆ. ಒಮ್ಮೆ ನಾನು ವೇದಿಕೆ ಮೇಲೆ ಹಾಡಿರುವ ಗೀತೆಯನ್ನು ಮತ್ತೊಂದು ಊರಿನಲ್ಲಿ ಕಾರ್ಯಕ್ರಮ ನೀಡಲು ಹೋದಾಗ, ಜನರೇ ಆಗ್ರಹಿಸಿ ಕೇಳಿದರೆ ಆ ಹಾಡು ಎಲ್ಲರ ಮನಸ್ಸಿಗೆ ಇಳಿದಿದೆ ಎಂದರ್ಥ'. ಶ್ರೇಯಾ, ರಿಯಾಲಿಟಿ ಶೋ ತೀರ್ಪುಗಾರರಾಗಿಯೂ ಕೆಲಸ ಮಾಡುತ್ತಾರೆ. ಹೀಗಾಗಿ ಒಂದು ಹಾಡು ಜನಮನ ಗೆಲ್ಲುವುದು ಹೇಗೆ ಎಂಬ ಸತ್ಯ ಅರಿತಿದ್ದಾರೆ.

ತನಿಷ್ಕ್ ಬಾಗ್ಚಿ ಕಳೆದ ವರ್ಷ 'ಸಯ್ಯಾರಾ' ಹಿಂದಿ ಸಿನಿಮಾ ಗೀತೆಗಳ ಸಂಗೀತದಿಂದ ಜನಪ್ರಿಯತೆ ಗಳಿಸಿದವರು. ಅವರಿಗೆ ಭಾರತದ ಚಿತ್ರ ಸಂಗೀತದಲ್ಲಿ ಇರುವ ಸಂಭಾವನೆ ವ್ಯವಸ್ಥೆಯ ಬಗ್ಗೆ ಅಸಮಾಧಾನವಿದೆ. ಪಶ್ಚಿಮ ದೇಶಗಳಲ್ಲಿ ಒಂದು ಹಾಡು ಸಿದ್ಧಗೊಳ್ಳಲು ಕೆಲಸ ಮಾಡುವ ಎಂಜಿನಿಯರ್ ಕೂಡ ಒಳ್ಳೆಯ ಸಂಭಾವನೆ ಪಡೆಯುತ್ತಾನೆ. ಸ್ವರ ಸಂಯೋಜಕ, ಗಾಯಕ–ಗಾಯಕಿ ಅಷ್ಟೇ ಅಲ್ಲದೆ ವಾದ್ಯಗಾರರಿಗೂ ನಿಯಮಿತವಾಗಿ ಸಂಭಾವನೆ ಇಂತಿಷ್ಟು ಎಂದು ಗೊತ್ತುಪಡಿಸಿರುತ್ತಾರೆ. ಹಾಡು ಮರುಬಳಕೆ ಆದಾಗಲೂ ಅವರೆಲ್ಲರಿಗೆ ಸಂಭಾವನೆ ಸಂದಾಯ ಆಗುತ್ತಲೇ ಇರುತ್ತದೆ. ನಮ್ಮ ದೇಶದ ಚಿತ್ರ ಸಂಗೀತದಲ್ಲಿ ಒಮ್ಮೆ ಸಂಭಾವನೆಯ ಪ್ಯಾಕೇಜ್ ಕೊಟ್ಟರೆ ಮುಗಿಯಿತು. ಆಮೇಲೆ ಅದು ಮರುಬಳಕೆ ಆದರೆ, ಹಣ ಕೇಳಲು ಪರದಾಡಬೇಕು ಎನ್ನುತ್ತಾರೆ ತನಿಷ್ಕ್.

'ಇಂಡಿಯನ್ ಪರ್ಫಾರ್ಮಿಂಗ್ ರೈಟ್ಸ್ ಸೊಸೈಟಿ' (ಐಪಿಆರ್‌ಎಸ್) ಸಂಭಾವನೆಯು ಸರಿಯಾಗಿ ಎಲ್ಲ ಸಂಗೀತ ಕರ್ಮಿಗಳಿಗೂ ಸಲ್ಲಬೇಕು ಎಂಬ ನಿಟ್ಟಿನಲ್ಲಿ ಹೋರಾಡುತ್ತಿದೆ. ಮುಂದಿನ ದಿನಗಳಲ್ಲಿ ಈ ವಿಷಯದಲ್ಲಿ ಇನ್ನಷ್ಟು ಸುಧಾರಣೆ ಕಾಣುವ ನಿರೀಕ್ಷೆ ಇದೆ ಎನ್ನುವ ತನಿಷ್ಕ್ ಕೂಡ ಶ್ರೇಯಾ ಹೇಳಿದ ಜನಪ್ರಿಯತೆಯ ಸತ್ಯವನ್ನು ಒಪ್ಪುತ್ತಾರೆ. ■

## ರಜನಿ-ಕಮಲ್: ನೆಲ್ಸನ್ ನಿರ್ದೇಶನ

ರಜನಿಕಾಂತ್ ಹಾಗೂ ಕಮಲಹಾಸನ್ ಒಟ್ಟಾಗಿ ಅಭಿನಯಿಸುತ್ತಿರುವ ತಮಿಳು ಸಿನಿಮಾವನ್ನು ನೆಲ್ಸನ್ ನಿರ್ದೇಶಿಸಲಿದ್ದಾರೆ ಎನ್ನುವುದನ್ನು ಒಂದು ಟೀಸರ್ ದೃಢಪಡಿಸಿದೆ.

'ಜೈಲರ್' ಚಿತ್ರದಿಂದ ಜನಪ್ರಿಯತೆಯ ಹಳಿಗೆ ಮರಳಿದ ನೆಲ್ಸನ್ ಅವರನ್ನು ರಜನಿ ಹಾಗೂ ಕಮಲ್ ಇಬ್ಬರೂ ಈಗ ನೆಚ್ಚಿಕೊಂಡಿದ್ದಾರೆ. ಕಮಲ್ ಈ ಸಿನಿಮಾಗೆ ಬಂಡವಾಳವನ್ನೂ ವಿನಿಯೋಗಿಸುತ್ತಿದ್ದು, ಚಿತ್ರ ಹೇಗಿರಲಿದೆಯೋ ಎಂಬ ನಿರೀಕ್ಷೆ ಗರಿಗೆದರಿದೆ.

ಲಲನೆಯರು ಮಾದಕವಾಗಿ ಕಾರು ತೊಳೆಯುತ್ತಾ ಇರುತ್ತಾರೆ. ಅಲ್ಲಿಗೆ ರೆಟ್ರೋ ಅವತಾರದಲ್ಲಿ ಬರುವ ಕಮಲ್ ಹಾಗೂ ರಜನಿ, ಒಂದು ಹಳೆಯ ಐಷಾರಾಮಿ ಕಾರಿನೊಳಗೆ ಕೂರುತ್ತಾರೆ. ಹಿಂದಿನ ಸೀಟಲ್ಲಿ ನೆಲ್ಸನ್ ಹಾಗೂ ಸಂಗೀತ ನಿರ್ದೇಶಕ ಅನಿರುದ್ಧ್ ಕೂತಿರುತ್ತಾರೆ. ಬಪ್ಪಿ ಲಹರಿ ಶೈಲಿಯ ಸಂಗೀತದಿಂದ ಸ್ಫೂರ್ತಿ ಪಡೆದು ಒಂದು ಬೀಟ್ ಮಾಡಿರುವುದಾಗಿಯೂ, ಅದನ್ನು ಕೇಳಿಸುವುದಾಗಿಯೂ ಅನಿರುದ್ಧ್ ಹೇಳುತ್ತಾರೆ. ಆಗ, ಡ್ರೈವರ್ ಸೀಟಲ್ಲಿ ಕೂತಿದ್ದ ಕಮಲ್, 'ಮೊದಲಿಗೆ ನಾಯಕ ಯಾರೆಂದು ಹೇಳಿ' ಎಂದು ಕೇಳುತ್ತಾರೆ. ರಜನಿ ಕೂಡ ಅದೇ ಪ್ರಶ್ನೆ ಕೇಳುತ್ತಾರೆ. ನೆಲ್ಸನ್ ಹಾಗೂ ಅನಿರುದ್ಧ್ ರವಿಚಂದರ್ ತಬ್ಬಿಬ್ಬಾದಂತೆ ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳುತ್ತಾರೆ. ಆಗ ಕಮಲ್ ವೇಗವಾಗಿ ಕಾರು ಓಡಿಸಿಕೊಂಡು ಮುನ್ನುಗ್ಗುತ್ತಾರೆ. ಈ ಪರಿಚಯದ ವಿಡಿಯೊ ಅನೇಕರ ಗಮನಸೆಳೆದಿದೆ.



ನೆಲ್ಸನ್

